"ಹಲೋ..."
"ಹೂ ಹೇಳ್ ಚಿಕಪ..."
"ಅಲ್ಲವಾ ತಯೀ... ಅಣ್ಣ..." (ಜೋರಾಗಿ ಬಿಕ್ಕಳಿಸುವ ಸದ್ದು)
"ಅಣ್ಣ? ಏನಾತು?" (ಗಾಬರಿಯಿಂದ)
"ಏನೂ ಇಲ್ಲ... ಅಲ್ಲಾ..."
"ಮುಂದಕ್ಕೇಳು ಚಿಕಪ." (ಅಸಹನೆಯಿಂದ)
"ಅಣ್ಣ... ಮತೆ... ಅಲ್ಲ ಅಣ್ಣ ಹ್ಯಂಗದನೆ?"
"ಥೋ! ಚನಾಗೈತಿ... ಯಾಕ್ ಚಿಕಪ?"
"ಅಲ್ಲವಾ... ಊರಾಗ ಹೂಳದು ಬ್ಯಾಡ ಅಂತ ಬಾಡಿ ಮೆಡಿಕಲ್ ಕಾಲೇಜಿಗೆ ಬರದನಂತೆ?" (ಆಮೇಲೆ ಹೋ ಅಂತ ಅಳು... ನನಗೆ ಮುಂದಿನದ್ದು ಕೇಳಿಸಿಕೊಳ್ಳುವ ತಾಳ್ಮೆ ಇರಲಿಲ್ಲ...)
"ಹೂ ಅದಕ್ಕೇನೀಗ?"
(ಅಳುವನ್ನು ತಡೆಯುತ್ತಾ) "ಹಂಗ ಮಾಡಬ್ಯಾಡ ಅನ್ನವಾ... ಏನೇ ಆಗಲಿ ನಮ್ಮೂರು ನಮ್ಮ ಜನ... ಅಲ್ಲೇ ಮಣ್ಣಾಗಬಕು ನಾವು..."
"ಆತು ಹೇಳತನಿ... ನೀ ಸಮಾಧಾನ ಮಾಡಿಕ್ಯ."
"ನನ್ ಮಾತು ನೀ ತಗದು ಹಾಕಂಗಿಲ್ಲ... ಮತ್ತ ಐನ್ ಟೈಮಿಗೆ ನಮ್ಮಪ್ಪಜಿಗೆ ಬಾಡಿ ಕ್ವಡಬಕು ಅಂತ ಇತ್ತು ಅಂದು–ಗಿಂದೀ ಮತ್ತ..."
"ಆತು ನೋಡನಂತ ಬಿಡು..."
"ಹಂಗನ್ನಬ್ಯಾಡ... ಮಾತು ಕ್ವಡು..."
"ಥೋ! ಒಳ್ಳೆ ಯಾತುರುದು ಚಿಕಪ ಇದು... ಆಮ್ಯಾಲ ಮಾತಾಡನ ಸುಮ್ನಿರು..."
"ಇಲ್ಲ ಈಗಲೇ ಹೇಳಬಕು..."
"ಅಯ್ಯ ನಿನ್ನ! ನಿಮ್ಮಣ್ಣ ಇನ್ನೂ ಹೋಗೇ ಇಲ್ಲ... ಹೋಗ್ಯರ ಹೋಗಲಿ ತಡಿ!" ಎಂದು ಹೇಳುತ್ತಾ ನನಗೆ ನಗು ಬಂದುಬಿಟ್ಟಿತು... ಅತ್ತ ಚಿಕ್ಕಪ್ಪ ಕಕ್ಕಾಬಿಕ್ಕಿ. ಅಲ್ಪ ಸ್ವಲ್ಪ ಬೈದುಕೊಂಡು ಫೋನ್ ಇಟ್ಟರು. ಇತ್ತ ತಿರುಗಿದರೆ ಇಷ್ಟೂ ಚರ್ಚೆಗೆ ಕಾರಣರಾದ ನಮ್ಮ ತಂದೆ ಗಣಿತದ ಪ್ರೊಫೆಸರ್ರು ಶ್ರೀಮಾನ್ ಬಿ.ಜಿ. ನಾಗರಾಜರು ತಾವು ಕಡಾವರ್ ಡೊನೇಶನ್ ಅಥವಾ ದೇಹದಾನ ಮಾಡಿಬಿಟ್ಟಿದ್ದೀನಿ ಎಂದು ತಮ್ಮನಿಗೆ ಅಂದರೆ ನನ್ನ ಚಿಕ್ಕಪ್ಪನಿಗೆ ಹೇಳಿ ದಿಗಿಲಿಕ್ಕಿಸಿದ್ದರು. ಆಗ ಅಪ್ಪ ಹಾಲಿ ಇದ್ದದ್ದು ಮೈಸೂರಿನಲ್ಲಿ, ನನ್ನ ಚಿಕ್ಕಪ್ಪ ನಮ್ಮ ಮೂಲ ಊರಾದ ದಾವಣಗೆರೆಯಲ್ಲಿ. ಈ ವಿಚಾರ ಮಗಳಾದ ನನ್ನ ಸುಪರ್ದಿಗೆ ಬರುತ್ತೆ ಅಂತ ಕಡ್ಡಾಯವಾಗಿ ನನ್ನ ಚಿಕ್ಕಪ್ಪ ಈಗಲೇ ನಿರ್ಧಾರ ಮಾಡುವ ಅವರಸರಲ್ಲಿದ್ದರು. ಐದಾರು ವರ್ಷಗಳ ಹಿಂದಿನ ಮಾತಿದು.
"ಯಾಕಪಜಿ ಸುಮ್ನಿರದು ಬಿಟ್ಟು ಆ ಕಡಾವರ್ ಡೊನೇಷನ್ನಿನ ವಿಚಾರ ಎಲ್ರು ತಗೂ ಮಾತಾಡ್ತೀರಿ?" ಎಂದು ಕೇಳಿದರೆ, ಗರಿಗರಿಯಾದ ಮೂರನೇ ದೋಸೆ, ಆಲೂಗಡ್ಡೆ ಪಲ್ಯ, ಶೇಂಗಾ ಚಟ್ನಿ ಧ್ವಂಸ ಮಾಡುತ್ತಾ ನಮ್ಮಪ್ಪ ಪಾರಮಾರ್ಥಿಕ ಮಾತನಾಡಿದರು.
"ಏನೇ ಆಗಲಿ ನನ್ನ ಬಾಡಿ ಊರಿಗೆ ತಂಗಂದು ಹೋಗಂಗಿಲ್ಲ..." (ನನ್ನ ತಂದೆಯ ಊರು ದಾವಣಗೆರೆಯಿಂದ ಅರ್ಧ ತಾಸಿನ ಹಾದಿಯಲ್ಲಿರುವ ಬೂದಿಹಾಳು ಎನ್ನುವ ಗ್ರಾಮ).
"ಹಂಗ್ಯಾಕ?"
"ನಮ್ಮದೇನೈತಿ ಅಲ್ಲಿ... ಹ್ವಲ ಮನಿ... ಅವೆಲ್ಲಾ ಯಾಕ ಬೇಕು... ಸುಮ್ಮ ಮೆಡಿಕಲ್ ಕಾಲೇಜಿಗೆ ಕ್ವಡು... ಓದಾ ಹುಡ್ರು ಸ್ಟಡಿ ಮಾಡತರೆ..."